ಪ್ರವಾದಿ ನೂಹ್(ಅ)

ನೂಹ್ ಅಲೈಹಿಸ್ಸಲಾಮರು ಅಲ್ಲಾಹನ ಮಹಾನ್ ಪ್ರವಾದಿ ಮತ್ತು ದೃಢ ಸಂಕಲ್ಪವುಳ್ಳ (ಉಲುಲ್ ಅಝ್ಮ್) ಸಂದೇಶವಾಹಕರುಗಳಲ್ಲಿ ಒಬ್ಬರಾಗಿದ್ದಾರೆ. ಅವರು ದ್ವಿತೀಯ ಆದಮ್ ಎಂದೂ ಪ್ರಸಿದ್ಧರಾಗಿದ್ದಾರೆ. ಕೆಲವು ವಿದ್ವಾಂಸರ ಪ್ರಕಾರ, ಆದಮರ(ಅ) ನಂತರ ನೂರ ಇಪ್ಪತ್ತಾರು ವರ್ಷಗಳ ಬಳಿಕ ಅವರು ಜನಿಸಿದ್ದರು. ಕೆಲವು ಹದೀಸ್‌ಗಳ ಪ್ರಕಾರ ಆದಮ್ ಮತ್ತು ನೂಹರ ನಡುವೆ ಹತ್ತು ಶತಮಾನಗಳು ಅಥವಾ ಹತ್ತು ಪೀಳಿಗೆಯ ಅಂತರವಿದೆ. ಅದೇ ವೇಳೆ, ಇನ್ನು ಕೆಲವು ಹದೀಸ್‌ಗಳಲ್ಲಿ 'ಹತ್ತು ಕರ್ನ್' ಎಂಬ ಪದ ಬಂದಿದೆ. ಕರ್ನ್‌ಗೆ ಪೀಳಿಗೆಯೆಂದು ಅರ್ಥ ನೀಡಿದರೂ ಒಂದು ಪೀಳಿಗೆಯು ಹಲವು ಶತಮಾನಗಳ ಕಾಲ ಬಾಳುತ್ತಿತ್ತಾದ್ದರಿಂದ ಈ ಅಂತರವು ಸಾವಿರಾರು ವರ್ಷಗಳಾಗುತ್ತದೆ. (ವಾಸ್ತವವೇನೆಂಬುದನ್ನು ಅಲ್ಲಾಹನೇ ಬಲ್ಲನು).

ನೂಹ್‌ರ ಸಮುದಾಯದಲ್ಲಿ ವಿಗ್ರಹಾರಾಧನೆಯ ಆರಂಭ

ಪವಿತ್ರ ಕುರ್‌ಆನಿನಲ್ಲಿ ನೂಹ್‌ರ ಸಮುದಾಯದಲ್ಲಿ ಪ್ರಚಲಿತವಿದ್ದ ವಿಗ್ರಹಗಳ ಹೆಸರನ್ನು ಪ್ರಸ್ತಾಪಿಸಲಾಗಿದೆ. ಅಲ್ಲಾಹ್ ಹೇಳುತ್ತಾನೆ,

﴿ وَقَالُوا لَا تَذَرُنَّ آلِهَتَكُمْ وَلَا تَذَرُنَّ وَدًّا وَلَا سُوَاعًا وَلَا يَغُوثَ وَيَعُوقَ وَنَسْرًا ﴿٢٣﴾ ﴾ نوح: ٢٣

"ಇವರು 'ಎಷ್ಟು ಮಾತ್ರಕ್ಕೂ ನಿಮ್ಮ ಆರಾಧ್ಯರನ್ನು ತ್ಯಜಿಸಬೇಡಿರಿ. ವದ್ದ್, ಸುವಾಅ್, ಯಗೂಸ್, ಯಊಕ್ ಮತ್ತು ನಸ್ರ್‌ಗಳನ್ನು ಬಿಡಬೇಡಿರಿ' ಎಂದು ಹೇಳಿದರು." (ಪವಿತ್ರ ಕುರ್‌ಆನ್: 71: 23)

ವಿಗ್ರಹಾರಾಧನೆಯ ಆರಂಭವು ಪ್ರವಾದಿ ನೂಹರ(ಅ) ಸಮುದಾಯದಲ್ಲಾಗಿತ್ತು. ವದ್ದ್, ಸುವಾಅ್, ಯಊಕ್, ಯಗೂಸ್ ಮತ್ತು ನಸ್ರ್‌ಗಳೆಲ್ಲವೂ ಆ ಸಮುದಾಯದ ಸಜ್ಜನರ ಹೆಸರುಗಳಾಗಿವೆ. ಅವರು ಅಲ್ಲಾಹನ ಸದ್ಭಕ್ತರಾದ ವಿದ್ವಾಂಸರಾಗಿದ್ದರು. ಅವರು ನಿಧನರಾದಾಗ ಇಡೀ ಸಮುದಾಯವು ದುಃಖಕ್ಕೀಡಾಗುತ್ತಿತ್ತು. ಶೈತಾನನು ಬಂದು, ಆ ಸಜ್ಜನರ ನೆನಪಿಗೆ ಅವರ ಚಿತ್ರವನ್ನು ರಚಿಸಬಾರದೇಕೆ ಎನ್ನುತ್ತಿದ್ದ. ಜನರಿಗೆ ಈ ಅಭಿಪ್ರಾಯವು ಇಷ್ಟವಾಗುತ್ತಿತ್ತು. ಈ ಪ್ರಕಾರ ಜನರು ಆ ಸಜ್ಜನರ ಒಳಿತುಗಳನ್ನು ಸ್ಮರಿಸುತ್ತಿದ್ದರು. ತರುವಾಯ ಒಂದು ದೀರ್ಘ ಕಾಲ ಕಳೆದ ಮೇಲೆ ಅವರ ಮುಂದಿನ ಪೀಳಿಗೆಯು ವಾಸ್ತವವನ್ನು ಅರಿಯದೆ, ಕೇವಲ ಆಚರಣೆಯೆಂಬ ನೆಲೆಯಲ್ಲಿ ಆ ಚಿತ್ರಗಳ ಮೇಲೆ ವಿಶ್ವಾಸವನ್ನಿರಿಸುತ್ತಾರೆ. ಬಳಿಕ ಅವರ ಸ್ಮರಣೆಯನ್ನು ಇನ್ನೂ ಗಟ್ಟಿಗೊಳಿಸಲಿಕ್ಕಾಗಿ ಶೈತಾನನು ಅವರ ವಿಗ್ರಹಗಳನ್ನು ಮಾಡಿಸಿದನು. ಈ ಪ್ರಕಾರ, ಹಂತಹಂತವಾಗಿ ಆ ವಿಗ್ರಹಗಳಿಗೆ ದೇವನ ಗುಣವಿಶೇಷಗಳನ್ನು ಹೊರಿಸಲಾಯಿತು ಮತ್ತು ಈ ವಿಗ್ರಹಗಳಿಂದಾಗಿಯೇ ನಮಗೆ ಆಹಾರ ದೊರೆಯುತ್ತದೆ ಎಂಬ ನಂಬಿಕೆ ವ್ಯಾಪಕವಾಗತೊಡಗಿತು. ಅವೇ ನಮ್ಮ ಅನ್ನದಾತವಾಗಿವೆ, ಅವುಗಳ ದೆಸೆಯಿಂದಲೇ ಮಳೆಯಾಗುತ್ತದೆ ಎಂಬ ವಿಶ್ವಾಸ ಬೆಳೆಯತೊಡಗಿತು. ಕ್ರಮೇಣ ಅವರನ್ನು ಸಂತೋಷ ಪಡಿಸಲಿಕ್ಕಾಗಿ ಮತ್ತು ಅವರ ಕ್ರೋಧದಿಂದ ರಕ್ಷೆ ಹೊಂದಲಿಕ್ಕಾಗಿ ಬಹುದೇವತ್ವದ ಅನೇಕ ಕರ್ಮಗಳನ್ನು ಎಸಗತೊಡಗಿದರು.

ಪ್ರವಾದಿ ನೂಹ್(ಅ)ರ ಸಂದೇಶ

ತಮ್ಮ ಸಮುದಾಯದಲ್ಲಿ ವಿಗ್ರಹಾರಾಧನೆ ವ್ಯಾಪಕವಾಗುತ್ತಿರುವುದನ್ನು ಕಂಡ ಪ್ರವಾದಿ ನೂಹರು(ಅ) ಏಕದೇವನ ಆರಾಧನೆ ಮತ್ತು ದಾಸ್ಯತನದ ಸಂದೇಶವನ್ನು ನೀಡಲು ಪ್ರಾರಂಭಿಸಿದರು. ನೂಹರು(ಅ) ಅವರೊಡನೆ ಹೀಗೆ ಹೇಳಿದರು,

www.uzairfalahi.com

﴿لَقَدۡ أَرۡسَلۡنَا نُوحًا إِلَىٰ قَوۡمِهِۦ فَقَالَ يَٰقَوۡمِ ٱعۡبُدُواْ ٱللَّهَ مَا لَكُم مِّنۡ إِلَٰهٍ غَيۡرُهُۥٓ إِنِّيٓ أَخَافُ عَلَيۡكُمۡ عَذَابَ يَوۡمٍ عَظِيمٖ ٥٩﴾ الأعراف: ٥٩

"ಓ ನನ್ನ ಜನಾಂಗ ಬಾಂಧವರೇ, ಅಲ್ಲಾಹನ ದಾಸ್ಯ–ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನಾನು ನಿಮ್ಮ ಬಗ್ಗೆ ಒಂದು ಭಯಾನಕ ದಿನದ ಯಾತನೆಯಿಂದ ಭಯಪಡುತ್ತೇನೆ." (ಪವಿತ್ರ ಕುರ್‌ಆನ್: 7: 59)

ಪ್ರವಾದಿ ನೂಹ್(ಅ)ರವರ ಕರೆಗೆ ಓಗೊಟ್ಟು, ಕೆಲವು ಮಂದಿ ಬಡವರು ಮತ್ತು ದುರ್ಬಲರು ವಿಶ್ವಾಸವಿರಿಸಿದರು. ಸಮುದಾಯದ ನೇತಾರರು ಮತ್ತು ಶ್ರೀಮಂತ ವರ್ಗದವರು ಅವರನ್ನು ಗೇಲಿ ಮಾಡಿದರು ಹಾಗೂ ಅವರ ಆಹ್ವಾನವನ್ನು ಸದಾ ನಿರಾಕರಿಸುತ್ತಲೇ ಬಂದರು. ಅವರು ಈ ರೀತಿ ಹೇಳತೊಡಗಿದರು,

﴿مَا نَرَىٰكَ إِلَّا بَشَرٗا مِّثۡلَنَا وَمَا نَرَىٰكَ ٱتَّبَعَكَ إِلَّا ٱلَّذِينَ هُمۡ أَرَاذِلُنَا بَادِيَ ٱلرَّأۡيِ وَمَا نَرَىٰ لَكُمۡ عَلَيۡنَا مِن فَضۡلِۭ بَلۡ نَظُنُّكُمۡ كَٰذِبِينَ ٢٧﴾ هود: ٢٧

"ನೀವು ನಮ್ಮ ದೃಷ್ಟಿಯಲ್ಲಿ ನಮ್ಮಂತಹ ಒಬ್ಬ ಮಾನವನಾಗಿರುವಿರೇ ವಿನಾ ಇನ್ನೇನೂ ಅಲ್ಲ. ನಮ್ಮ ಜನಾಂಗದಲ್ಲಿ ನೀಚರಾಗಿದ್ದವರು ಮಾತ್ರ ಹಿಂದು ಮುಂದು ನೋಡದೆ ನಿಮ್ಮನ್ನು ಅನುಸರಿಸುತ್ತಿರುವುದನ್ನು ನಾವು ಕಾಣುತ್ತೇವೆ. ನೀವು ನಮಗಿಂತ ಯಾವ ವಿಷಯದಲ್ಲೂ ಶ್ರೇಷ್ಠರಾಗಿರುವುದನ್ನು ನಾವು ಕಾಣುವುದಿಲ್ಲ. ಮಾತ್ರವಲ್ಲ, ನಾವು ನಿಮ್ಮನ್ನು ಸುಳ್ಳುಗಾರನೆಂದೆಣಿಸುತ್ತೇವೆ." (ಪವಿತ್ರ ಕುರ್‌ಆನ್: 11: 27)

ನೂಹ್(ಅ)ರವರು ತಮ್ಮ ಸಮುದಾಯದ ಅತಿರೇಕದ ವರ್ತನೆಯಿಂದ ಎಳ್ಳಷ್ಟೂ ನಿರಾಶರಾಗದೆ, ಹಗಲು ರಾತ್ರಿ ಅವರನ್ನು ಅಲ್ಲಾಹನ ಕಡೆಗೆ ಆಹ್ವಾನಿಸುತ್ತಲೇ ಇದ್ದರು. ಅವರು ಎಲ್ಲ ರೀತಿಯ ವಿಧಾನವನ್ನೂ ಅನುಸರಿಸಿದರು. ಒಬ್ಬೊಬ್ಬರನ್ನು ಸಂಧಿಸಿ ವೈಯಕ್ತಿಕವಾಗಿ ತಿಳಿ ಹೇಳಿದರು. ಜನರನ್ನು ಸೇರಿಸಿ ಬಹಿರಂಗವಾಗಿಯೂ ಸಂದೇಶ ಪ್ರಚಾರ ನಡೆಸಿದರು. ನಯವಾಗಿ ಪ್ರೀತಿಯಿಂದ ಅಲ್ಲಾಹನ ಕಡೆಗೆ ಆಹ್ವಾನಿಸಿದರು. ಪರಲೋಕದ ಯಾತನೆಯ ಎಚ್ಚರಿಕೆ ನೀಡುತ್ತಾ ಅಲ್ಲಾಹನ ಕಡೆಗೆ ಮುಖ ಮಾಡಲು ಉಪದೇಶಿಸಿದರು. ಆದರೆ ಸಮುದಾಯದ ಮಂದಿ ಅದಾವುದಕ್ಕೂ ಜಗ್ಗಲಿಲ್ಲ. ಪ್ರವಾದಿ ನೂಹ್(ಅ)ರು ಅವರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಿದಷ್ಟೂ ಅವರು ನಿಷೇಧದಲ್ಲಿ ಇನ್ನಷ್ಟು ನುಸುಳುತ್ತಾ ಸಾಗಿದರು. ಹೀಗೆ ಒಮ್ಮೆ ಸಮುದಾಯದ ಶ್ರೀಮಂತರು ನೂಹ್(ಅ)ರೊಡನೆ, "ಈ ಫಕೀರರು ಮತ್ತು ನೀಚರೊಡನೆ ನಾವು ಕೂರಲಾರೆವು. ಆ ಜನರನ್ನು ನಿಮ್ಮಿಂದ ದೂರಗೊಳಿಸಿದರೆ ನಾವು ನಿಮ್ಮ ಬಳಿಗೆ ಬರುವೆವು" ಎಂದು ಹೇಳಿದರು. ಆದರೆ ಪ್ರವಾದಿ ನೂಹ್(ಅ)ರು ಅವರ ಈ ಅಹಂಕಾರ ತುಂಬಿದ ಬೇಡಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಸ್ಪಷ್ಟವಾಗಿ ಹೇಳಿದರು, "ಅದು ಹೇಗೆ ಸಾಧ್ಯ? ಅವರು ಅಲ್ಲಾಹನ ಮೇಲೆ ವಿಶ್ವಾಸವಿರಿಸುವವರಾಗಿದ್ದಾರೆ. ನಾನು ನಿಮ್ಮಂತಹ ಅಜ್ಞಾನಿಗಳಿಗಾಗಿ ಅವರನ್ನು ದೂರ ಮಾಡಿ ಅಲ್ಲಾಹನ ದೃಷ್ಟಿಯಲ್ಲಿ ಪಾಪಿಯಾಗಲಾರೆ!" ಈ ಉತ್ತರ ಕೇಳಿ ಸಮುದಾಯದ ಶ್ರೀಮಂತರು ಕೋಪದಿಂದ ಕುದಿಯತೊಡಗಿದರು. ಅವರು ಈ ರೀತಿ ಹೇಳಿದರು,

﴿قَالَ ٱلۡمَلَأُ مِن قَوۡمِهِۦٓ إِنَّا لَنَرَىٰكَ فِي ضَلَٰلٖ مُّبِينٖ ٦٠﴾ الأعراف: ٦٠

"ನಮಗಂತೂ ನೀವು ಸುವ್ಯಕ್ತ ಪಥಭ್ರಷ್ಟತೆಯಲ್ಲಿ ಸಿಲುಕಿರುವುದು ಕಂಡು ಬರುತ್ತದೆ." (ಪವಿತ್ರ ಕುರ್‌ಆನ್: 7: 60)

ಅದಕ್ಕೆ ನೂಹ್(ಅ)ರವರು ಈ ರೀತಿ ಉತ್ತರ ನೀಡಿದರು,

﴿ قَالَ يَٰقَوۡمِ لَيۡسَ بِي ضَلَٰلَةٞ وَلَٰكِنِّي رَسُولٞ مِّن رَّبِّ ٱلۡعَٰلَمِينَ ٦١ أُبَلِّغُكُمۡ رِسَٰلَٰتِ رَبِّي وَأَنصَحُ لَكُمۡ وَأَعۡلَمُ مِنَ ٱللَّهِ مَا لَا تَعۡلَمُونَ ٦٢ ﴾ الأعراف: ٦١ - ٦٢

"ಓ ನನ್ನ ಜನಾಂಗ ಬಾಂಧವರೇ, ನಾನು ಯಾವುದೇ ಪಥಭ್ರಷ್ಟತೆಯಲ್ಲಿ ಸಿಲುಕಿರುವುದಿಲ್ಲ. ನಿಜವಾಗಿ ನಾನು ಸರ್ವಲೋಕ ಪಾಲಕನ ಸಂದೇಶವಾಹಕನಾಗಿರುತ್ತೇನೆ. ನಿಮಗೆ ನನ್ನ ಪ್ರಭುವಿನ ಸಂದೇಶಗಳನ್ನು ತಲುಪಿಸುತ್ತೇನೆ. ನಾನು ನಿಮ್ಮ ಹಿತಚಿಂತಕನಾಗಿರುತ್ತೇನೆ. ನಿಮಗೆ ತಿಳಿಯದಿರುವುದು ಅಲ್ಲಾಹನ ಕಡೆಯಿಂದ ನನಗೆ ತಿಳಿದಿದೆ." (ಪವಿತ್ರ ಕುರ್‌ಆನ್: 7: 61–62)

ಹೀಗೆ ಪ್ರವಾದಿ ನೂಹ್(ಅ)ರು ಸಂದೇಶ ಪ್ರಚಾರ ಮಾಡುತ್ತಲಿದ್ದರು. ಒಂದೆರಡು ದಿನ ಅಲ್ಲ, ಬದಲಾಗಿ ವರ್ಷಗಟ್ಟಲೆ, ಅಂದರೆ ಒಂಬೈನೂರೈವತ್ತು ವರ್ಷಗಳ ತನಕ ಜನರನ್ನು ಅಲ್ಲಾಹನ ಕಡೆಗೆ ಆಹ್ವಾನಿಸುತ್ತಿದ್ದರು. ಇತ್ತ ಜನರ ಅವಸ್ಥೆ ಏನಾಗಿತ್ತೆಂದರೆ, ನೂಹ್(ಅ)ರು ಏನಾದರೂ ಒಂದು ಮಾತು ಹೇಳುವಾಗ ಅವರು ತಮ್ಮ ಕಿವಿಗಳಿಗೆ ಬೆರಳು ತೂರಿಸುತ್ತಿದ್ದರು. ನೂಹ್(ಅ)ರು ಯಾರನ್ನಾದರೂ ಭೇಟಿ ನೀಡಲು ಹೋದಾಗಲೆಲ್ಲ, ಅವರಿಗೆ ತನ್ನ ಗುರುತು ಸಿಗದಿರಲೆಂದು ಅವನು ಬಟ್ಟೆಯಿಂದ ತನ್ನ ಮುಖವನ್ನು ಮುಚ್ಚಿಬಿಡುತ್ತಿದ್ದ. ಮರಣ ಹೊಂದುವವನು ತನ್ನ ಮಕ್ಕಳಿಗೆ, "ನನ್ನ ಬಳಿಕ ನೂಹ್‌ರ ಮಾತನ್ನು ಎಂದಿಗೂ ಆಲಿಸಬೇಡಿರಿ ಮತ್ತು ಅವರ ಮೇಲೆ ವಿಶ್ವಾಸವನ್ನಿರಿಸಬೇಡಿರಿ" ಎಂದು ವಸಿಯ್ಯತ್ ಮಾಡುತ್ತಿದ್ದ. ಕೊನೆಗೆ ಒಂದು ದಿನ ಸಮುದಾಯದ ಜನರು ಯಾತನೆಯ ಬೇಡಿಕೆಯನ್ನಿರಿಸಿದರು,

﴿ قَالُواْ يَٰنُوحُ قَدۡ جَٰدَلۡتَنَا فَأَكۡثَرۡتَ جِدَٰلَنَا فَأۡتِنَا بِمَا تَعِدُنَآ إِن كُنتَ مِنَ ٱلصَّٰدِقِينَ ٣٢ ﴾ هود: ٣٢

"ಓ ನೂಹ್! ನೀವು ನಮ್ಮೊಡನೆ ವಾಗ್ವಾದ ನಡೆಸಿದಿರಿ, ತುಂಬಾ ನಡೆಸಿದಿರಿ. ಇನ್ನು ನೀವು ಸತ್ಯವಾದಿಯಾಗಿದ್ದರೆ, ನೀವು ನಮಗೆ ಬೆದರಿಕೆ ಹಾಕುತ್ತಿರುವ ಆ ಯಾತನೆಯನ್ನು ಬರಮಾಡಿಸಿರಿ." (ಪವಿತ್ರ ಕುರ್‌ಆನ್: 11: 32)

ಪ್ರವಾದಿ ನೂಹ್(ಅ)ರು ತಮ್ಮ ಜನಾಂಗದವರ ಈ ಮೊಂಡು ಹಠಕ್ಕೆ ಎಚ್ಚರಿಕೆಯನ್ನು ನೀಡಿದರು ಮತ್ತು "ಯಾತನೆಯನ್ನು ಎರಗಿಸುವುದು ನನ್ನ ಕೈಯಲ್ಲಿಲ್ಲ. ಅದಂತೂ ಅಲ್ಲಾಹನ ಇಚ್ಛೆಯನ್ನು ಆಧರಿಸಿದೆ. ಆದರೆ ಅದು ಎರಗಿದಾಗ ನೀವು ಅದರಿಂದ ತಪ್ಪಿಸಲಾರಿರಿ" ಎಂದರು. ನೂಹ್(ಅ)ರು ತಮ್ಮ ಜನಾಂಗದವರ ಸ್ಥಿತಿಯಿಂದ ಬೇಸತ್ತು ಅಲ್ಲಾಹನಲ್ಲಿ ದೂರುತ್ತಾ, "ನನ್ನ ಪ್ರಭೂ! ನಾನು ಎಲ್ಲ ರೀತಿಯಿಂದಲೂ ಪ್ರಯತ್ನಿಸಿ ನೋಡಿದೆ. ಇವರು ನನ್ನನ್ನು ಸುಳ್ಳಾಗಿಸುತ್ತಲೇ ಇದ್ದಾರೆ. ಇನ್ನು ನಮ್ಮ ಮತ್ತು ಅವರ ನಡುವೆ ನೀನೇ ಒಂದು ತೀರ್ಮಾನವನ್ನು ಮಾಡಿ ಬಿಡು" ಎಂದರು. ಅಲ್ಲಾಹನು ನೂಹ್(ಅ)ರನ್ನುದ್ದೇಶಿಸಿ ಹೇಳಿದನು,

﴿ لَن يُؤۡمِنَ مِن قَوۡمِكَ إِلَّا مَن قَدۡ ءَامَنَ فَلَا تَبۡتَئِسۡ بِمَا كَانُواْ يَفۡعَلُونَ ٣٦ ﴾ هود: ٣٦

"ನಿಮ್ಮ ಜನಾಂಗದಲ್ಲಿ ವಿಶ್ವಾಸ ಸ್ವೀಕರಿಸುವವರೆಲ್ಲ ಸ್ವೀಕರಿಸಿಯಾಯಿತು. ಇನ್ನಾರೂ ಸ್ವೀಕರಿಸುವವರಿಲ್ಲ. ಅವರ ಕುಕೃತ್ಯಗಳಿಗಾಗಿ ದುಃಖಿಸುವುದನ್ನು ತೊರೆಯಿರಿ." (ಪವಿತ್ರ ಕುರ್‌ಆನ್: 11: 36)

ಈ ವಚನದಲ್ಲಿ ಅಲ್ಲಾಹನು ನೂಹ್(ಅ)ರಿಗೆ ಸಾಂತ್ವನ ನೀಡಿದನು. ಸಮುದಾಯದ ಈ ವರ್ತನೆಯಿಂದ ದುಃಖಿಸದಿರುವಂತೆ ಉಪದೇಶಿಸುತ್ತಾ, ಯಾರಿಗೆ ವಿಶ್ವಾಸವಿರಿಸಬೇಕಿತ್ತೋ ಅವರೆಲ್ಲ ವಿಶ್ವಾಸವಿರಿಸಿಯಾಗಿದೆ. ಇನ್ನು ಅವರ ಹೊರತು ಯಾರೂ ವಿಶ್ವಾಸವಿರಿಸುವವರು ಉಳಿದಿಲ್ಲ ಎಂದನು. ಅಂದರೆ ಇನ್ನು ಈ ಸಮುದಾಯದಲ್ಲಿ ಹೆಚ್ಚಿನ ಒಳಿತು ಉಳಿದಿಲ್ಲ ಮತ್ತು ಶೀಘ್ರವೇ

www.uzairfalahi.com

ಅವರನ್ನು ಕೊನೆಗೊಳಿಸಲಾಗುವುದು ಎಂಬ ಸೂಚನೆಯಾಗಿತ್ತು ಅದು. ಹೀಗೆ ನೂಹ್(ಅ)ರು ಒಂಬೈನೂರೈವತ್ತು ವರ್ಷಗಳ ಕಾಲ ನಿರಂತರ ಪರಿಶ್ರಮ ಪಟ್ಟ ಬಳಿಕ, ಇನ್ನು ಅವರ ಮೇಲೆ ಪ್ರಯತ್ನ ಪಡುವುದು ನಿರರ್ಥಕವೆಂದೆನಿಸಿದಾಗ ಅವರಿಗಾಗಿ ಈ ರೀತಿ ಶಾಪದ ಪ್ರಾರ್ಥನೆಯನ್ನು ಮಾಡಿದರು,

﴿ رَّبِّ لَا تَذَرۡ عَلَى ٱلۡأَرۡضِ مِنَ ٱلۡكَٰفِرِينَ دَيَّارًا ٢٦ إِنَّكَ إِن تَذَرۡهُمۡ يُضِلُّواْ عِبَادَكَ وَلَا يَلِدُوٓاْ إِلَّا فَاجِرٗا كَفَّارٗا ٢٧ ﴾ نوح: ٢٦ - ٢٧

“ನನ್ನ ಪ್ರಭೂ, ಈ ಸತ್ಯನಿಷೇಧಿಗಳ ಪೈಕಿ ಯಾರನ್ನೂ ಭೂಮಿಯ ಮೇಲೆ ನೆಲೆಸಲು ಬಿಡಬೇಡ. ನೀನು ಇವರನ್ನು ಹಾಗೆ ಬಿಟ್ಟರೆ, ಇವರು ನಿನ್ನ ದಾಸರನ್ನು ದಾರಿಗೆಡಿಸುವರು. ಇವರ ಸಂತತಿಯಲ್ಲಿ ಹುಟ್ಟುವ ಪ್ರತಿಯೊಬ್ಬನೂ ದುರಾಚಾರಿ ಮತ್ತು ಘೋರ ಸತ್ಯನಿಷೇಧಿಯೇ ಆಗುವನು.” (ಪವಿತ್ರ ಕುರ್‌ಆನ್: 71: 26–27)

ಅಲ್ಲಾಹನು ನೂಹ್(ಅ)ರ ಪ್ರಾರ್ಥನೆಯನ್ನು ಸ್ವೀಕರಿಸಿದನು ಮತ್ತು ಹೀಗೆ ಹೇಳಿದನು,

﴿ وَٱصۡنَعِ ٱلۡفُلۡكَ بِأَعۡيُنِنَا وَوَحۡيِنَا وَلَا تُخَٰطِبۡنِي فِي ٱلَّذِينَ ظَلَمُوٓاْ إِنَّهُم مُّغۡرَقُونَ ٣٧ ﴾ هود: ٣٧

“ನೋಡಿ, ತೀರ್ಮಾನವಾಗಿ ಬಿಟ್ಟಿದೆ ಮತ್ತು ಇದರಲ್ಲಿ ವಿಶ್ವಾಸಿಗಳಲ್ಲಿ ಸೇರದ ಎಲ್ಲರೂ ನಾಶವಾಗಿ ಹೋಗುವರು. ಹಾಗಾಗಿ ಯಾತನೆಯನ್ನು ಕಂಡು ನೀವು ಆ ಪೈಕಿ ಯಾರ ಬಗ್ಗೆಯೂ ಶಿಫಾರಸ್ಸು ಮಾಡಬಾರದು. ಈಗ ನಮ್ಮ ಮಾರ್ಗದರ್ಶನದಂತೆ ಒಂದು ಹಡಗನ್ನು ನಿರ್ಮಿಸಿರಿ. ಅದರಲ್ಲಿ ನಾವು ವಿಶ್ವಾಸಿಗಳನ್ನು ರಕ್ಷಿಸುವೆವು.” (ಪವಿತ್ರ ಕುರ್‌ಆನ್: 11: 37)

ಹೀಗೆ ದೇವಾದೇಶದಂತೆ ನೂಹ್(ಅ)ರು ಒಂದು ಹಡಗನ್ನು ನಿರ್ಮಿಸಲು ತೊಡಗಿದರು. ದೇವ ಯಾತನೆಗೆ ಅರ್ಹವಾದ ಸಮುದಾಯದ ಮಂದಿಗೆ ಪ್ರವಾದಿ ನೂಹ್(ಅ)ರನ್ನು ಅಣಕಿಸಲು ಇನ್ನೊಂದು ಅಸ್ತ್ರ ಸಿಕ್ಕಿ ಬಿಟ್ಟಿತು. ಪ್ರವಾದಿಯವರು(ಅ) ಹಡಗು ನಿರ್ಮಿಸುವುದನ್ನು ಕಂಡು ಅವರು, “ನೋಡಿ, ಇಲ್ಲಿ ನದಿಯಿಲ್ಲ, ಸಮುದ್ರವಿಲ್ಲ... ಈ ಒಣ ಮರಳುಗಾಡಿನಲ್ಲಿ ಹಡಗನ್ನು ಚಲಾಯಿಸುತ್ತಾರಂತೆ” ಎಂದು ಅಣಕಿಸತೊಡಗಿದರು. ಪ್ರವಾದಿಯವರು(ಅ) ಅವರ ಈ ಎಲ್ಲ ಅಣಕಕ್ಕೆ ಸಹನೆ ವಹಿಸಿದರು ಮತ್ತು ಹಡಗು ನಿರ್ಮಾಣದಲ್ಲಿ ಮಗ್ನರಾದರು. ಚಂಡಮಾರುತದ ಸಮಯ ಸನ್ನಿಹಿತವಾದಾಗ ಅಲ್ಲಾಹ್ ಅವರನ್ನುದ್ದೇಶಿಸಿ, “ಎಲ್ಲ ಸತ್ಯವಿಶ್ವಾಸಿಗಳನ್ನೂ ಅದರಲ್ಲಿ ಸವಾರರಾಗಿಸಿರಿ ಮತ್ತು ಪ್ರತಿಯೊಂದು ಜೀವಿಯ ಒಂದೊಂದು ಜೋಡಿಯನ್ನೂ (ಗಂಡು–ಹೆಣ್ಣು) ಅದರಲ್ಲಿ ಹತ್ತಿಸಿರಿ” ಎಂದು ಆದೇಶಿಸಿದನು. ಈ ಚಂಡಮಾರುತವು ಯಾವ ರೀತಿ ಬಂತು ಎಂಬುದನ್ನು ಅಲ್ಲಾಹನು ಈ ರೀತಿ ಬಣ್ಣಿಸಿರುವನು,

﴿ فَفَتَحۡنَآ أَبۡوَٰبَ ٱلسَّمَآءِ بِمَآءٖ مُّنۡهَمِرٖ ١١ وَفَجَّرۡنَا ٱلۡأَرۡضَ عُيُونٗا فَٱلۡتَقَى ٱلۡمَآءُ عَلَىٰٓ أَمۡرٖ قَدۡ قُدِرَ ١٢ ﴾ القمر: ١١ - ١٢

“ಆಗ ನಾವು ಧಾರಾಕಾರ ಮಳೆಯಿಂದ ಆಕಾಶದ ದ್ವಾರಗಳನ್ನು ತೆರೆದು ಬಿಟ್ಟೆವು; ನೆಲವನ್ನು ಸೀಳಿ ಚಿಲುಮೆಗಳಾಗಿ ಮಾರ್ಪಡಿಸಿ ಬಿಟ್ಟೆವು ಮತ್ತು ಈ ನೀರೆಲ್ಲ ವಿಧಿಸಲ್ಪಟ್ಟಿದ್ದ ಆ ಕಾರ್ಯವನ್ನು ಪೂರ್ತಿಗೊಳಿಸಲಿಕ್ಕಾಗಿ ಸೇರಿಕೊಂಡಿತು.” (ಪವಿತ್ರ ಕುರ್‌ಆನ್: 54: 11–12)

ಆಕಾಶದಿಂದ ಧಾರಾಕಾರ ಮಳೆ ಸುರಿಯಿತು ಮತ್ತು ಭೂಮಿಯು ಒಡೆದು ನೀರಿನ ಬುಗ್ಗೆಯು ಹರಿಯಿತು. ನೋಡು ನೋಡುತ್ತಿದ್ದಂತೆಯೇ ಎಲ್ಲೆಡೆ ನೀರು ತುಂಬಿತು. ಅದರಲ್ಲಿ ಸಮುದಾಯವು ಮುಳುಗತೊಡಗಿತು. ನೀರಿನ ಅಲೆಯು ಆಳೆತ್ತರಕ್ಕೆ ಏಳುತ್ತಾ ಸಾಗುತ್ತಿತ್ತು. ಜನರೆಲ್ಲ ಪರ್ವತಗಳೆಡೆಗೆ ಧಾವಿಸತೊಡಗಿದರು. ನೀರು ಪರ್ವತದೆತ್ತರಕ್ಕೆ ತಲುಪಲಾರದು ಎಂದು ಜನರು ಭಾವಿಸಿದ್ದರು. ಆದರೆ ಇದು ಸಾಮಾನ್ಯ ಚಂಡಮಾರುತವಾಗಿರಲಿಲ್ಲ; ಬದಲಾಗಿ ಅಲ್ಲಾಹನ ಯಾತನೆಯಾಗಿತ್ತು. ನೋಡು

www.uzairfalahi.com

ನೋಡುತ್ತಿದ್ದಂತೆಯೇ ಪರ್ವತಗಳೂ ಮುಳುಗತೊಡಗಿದುವು. ಅಷ್ಟರಲ್ಲಿ ಪ್ರವಾದಿ ನೂಹ್(ಅ)ರಿಗೆ ತಮ್ಮ ನಿಷೇಧಿ ಮಗ ಕನ್‌ಆನ್ ನೀರಿನ ಮಧ್ಯದಲ್ಲಿರುವುದು ಕಂಡಿತು. ಅವರು ಹೇಳಿದರು, "ಬಾ ಕಂದಾ, ಹಡಗನ್ನೇರು ಮತ್ತು ಈ ನಿಷೇಧಿಗಳ ಸಖ್ಯವನ್ನು ಬಿಟ್ಟು ಬಿಡು." ಆದರೆ ಇಂತಹ ಚಂಡಮಾರುತದಲ್ಲಿಯೂ ಅವನ ಕಣ್ಣು ತೆರೆಯಲಿಲ್ಲ. ಆತ ಹೇಳಿದ, "ನಾನು ದೊಡ್ಡ ಪರ್ವತವನ್ನೇರಿ, ಈ ನೀರಿನಿಂದ ರಕ್ಷೆ ಪಡೆಯುವೆನು. ಆದರೆ ನಿಮ್ಮ ಕೂಟದಲ್ಲಿ ಸೇರಲಾರೆ, ನಿಮ್ಮ ಮೇಲೆ ವಿಶ್ವಾಸವಿರಿಸಲಾರೆ." ಪ್ರವಾದಿ ನೂಹ್(ಅ) ಹೇಳಿದರು, "ಮಗೂ, ಇಂದು ಅಲ್ಲಾಹನ ಯಾತನೆಯಿಂದ ಯಾವುದೇ ವಸ್ತು ನಿನ್ನನ್ನು ರಕ್ಷಿಸಲಾರದು." ಅಷ್ಟರಲ್ಲಿ ಒಂದು ದೊಡ್ಡ ಅಲೆಯೇರಿ ಬಂತು ಮತ್ತು ಅವನು ಹೇಳ ಹೆಸರಿಲ್ಲದಂತಾಗಿ ಹೋದನು. ಎಲ್ಲವೂ ಮುಗಿದ ಮೇಲೆ ಅಲ್ಲಾಹನ ಆದೇಶದಂತೆ ಚಂಡಮಾರುತವು ತಗ್ಗಿತು,

﴿ وَقِيلَ يَٰٓأَرۡضُ ٱبۡلَعِي مَآءَكِ وَيَٰسَمَآءُ أَقۡلِعِي وَغِيضَ ٱلۡمَآءُ وَقُضِيَ ٱلۡأَمۡرُ وَٱسۡتَوَتۡ عَلَى ٱلۡجُودِيِّۖ وَقِيلَ بُعۡدٗا لِّلۡقَوۡمِ ٱلظَّٰلِمِينَ ٤٤ ﴾ هود: ٤٤

"ಓ ಭೂಮಿಯೇ, ನಿನ್ನ ನೀರನ್ನೆಲ್ಲ ಹೀರಿಕೋ ಮತ್ತು ಓ ಆಕಾಶವೇ, ತಡೆ!" ಎಂದು ಅಪ್ಪಣೆಯಾಯಿತು. ಆ ಪ್ರಕಾರ ನೀರು ನೆಲದೊಳಗೆ ಇಂಗಿತು. ತೀರ್ಮಾನ ಆಗಿ ಹೋಯಿತು. ನೌಕೆಯು ಜೂದಿಯಲ್ಲಿ ತಂಗಿತು. ಅಕ್ರಮಿಗಳ ಜನಾಂಗ ದೂರ ತೊಲಗಿತೆಂದು ಹೇಳಲಾಯಿತು. (ಪವಿತ್ರ ಕುರ್‌ಆನ್: 11: 44)

ಚಂಡಮಾರುತ ತಗ್ಗಿದ ಬಳಿಕ ನೂಹ್‌ರ(ಅ) ನಾವೆಯು ಜೂದಿ ಪರ್ವತದಲ್ಲಿ ಹೋಗಿ ನಿಂತಿತು. ಅಲ್ಲಾಹನ ಆದೇಶದಂತೆ ನೂಹ್(ಅ) ಮತ್ತು ಅವರ ಸಹಾಬಿಗಳು ನಾವೆಯಿಂದ ಇಳಿದರು; ಅಲ್ಲಿಂದಲೇ ಹೊಸ ಜೀವನವನ್ನು ಆರಂಭಿಸಿದರು.

ಕೆಲವು ವಾಸ್ತವಿಕತೆಗಳು ಮತ್ತು ಮುಖ್ಯಾಂಶಗಳು

- ಮಾನವೀಯತೆಯು ತನ್ನ ಯಾತ್ರೆಯನ್ನು ದೇವವಾಣಿ ಮತ್ತು ಪ್ರವಾದಿತ್ವದ ಮಾರ್ಗದರ್ಶನದೊಂದಿಗೆ ಆರಂಭಿಸಿತ್ತು. ಒಂದು ದೀರ್ಘ ಕಾಲದ ವರೆಗೆ ಏಕದೇವ ವಿಶ್ವಾಸದಲ್ಲಿಯೇ ಸ್ಥಿರವಾಗಿತ್ತು. ಆದರೆ ಶಿರ್ಕ್ ಎಂಬುದು ಎಂತಹ ಅಂಟುರೋಗವಾಗಿತ್ತೆಂದರೆ, ಎಲ್ಲ ರೂಪದಲ್ಲಿಯೂ ಮಾರ್ಗದರ್ಶನ ಇದ್ದ ಹೊರತಾಗಿಯೂ ಮಾನವನು ಶಿರ್ಕ್‌ನ ಮಾರಕ ರೋಗಕ್ಕೆ ತುತ್ತಾಗುತ್ತಾನೆ. ಇದೆಲ್ಲವೂ ಪ್ರಜ್ಞೆ ಮತ್ತು ಅನಾಸ್ಥೆಯ ಸಮಸ್ಯೆಯಾಗಿದೆ. ಪ್ರಜ್ಞೆಯ ಅವಸ್ಥೆಯು ನಿರಂತರ ಪರಿಶ್ರಮವನ್ನು ಬೇಡುತ್ತದೆ. ವಸ್ತುತಃ ಇದು ನಿರಂತರ ಏರುರಸ್ತೆಯ ಪ್ರಯಾಣವಾಗಿದೆ. ಸ್ವಲ್ಪ ನಿಂತರೂ ಅಜ್ಞಾತತೆಯು ಆವರಿಸಿ ಬಿಡುತ್ತದೆ. ಈ ಅಜ್ಞಾತತೆಯು ಅನಾಸ್ಥೆಗೆ ಮುನ್ನುಡಿಯಾಗುತ್ತದೆ. ಇನ್ನು ಅನಾಸ್ಥೆಯು ಆವರಿಸಿದಲ್ಲಿ ಔನ್ನತ್ಯವು ಅಧಃಪತನವಾಗಿ ಪರಿವರ್ತಿತಗೊಳ್ಳುತ್ತದೆ. ಚಿಂತನೆ ಮತ್ತು ಸಂಶೋಧನೆಯ ಜಾಗದಲ್ಲಿ ಅಂಧಾನುಕರಣೆ ಮತ್ತು ಸಾಂಪ್ರದಾಯಿಕತೆಯು ಮೇಳೈಸತೊಡಗುತ್ತದೆ. ಇರಾದೆ ಮತ್ತು ಧೈರ್ಯದ ಜಾಗದಲ್ಲಿ ಉದಾಸೀನತೆ ಮತ್ತು ನುಣುಚಿಕೊಳ್ಳುವ ಗುಣ ಬೆಳೆದು ಬರುತ್ತದೆ. ಕೊನೆಗೆ ವಿಶ್ವಾಸದ ಜಾಗದಲ್ಲಿ ಅಂಧವಿಶ್ವಾಸ ಮತ್ತು ಸಂಶೋಧನೆಯ ಜಾಗದಲ್ಲಿ ಮೂಢನಂಬಿಕೆಗಳು ಆವರಿಸುತ್ತವೆ. ಈ ರೀತಿ ಜೀವನದ ವಾಸ್ತವಿಕ ಕೌಶಲ್ಯವು ಅಳಿದು ಹೋಗುತ್ತದೆ ಮತ್ತು ಅದರ ಜಾಗದಲ್ಲಿ ಬಾಹ್ಯ ಆಚರಣೆಗಳು ಜೀವನದ ಪರಮಗುರಿಯಾಗಿ ಮಾರ್ಪಡುತ್ತವೆ.

- ಸಮುದಾಯಗಳ ಜೀವನದಲ್ಲಿ ಶೈತಾನನಿಗೆ ಸುಲಭದ ತುತ್ತಾಗುವಂತಹ ಸಂದರ್ಭವೂ ಇದುವೇ ಆಗಿದೆ. ಶೈತಾನನು ನೇರವಾಗಿ, ಶಿರ್ಕ್ ಮಾಡಲು ಹೇಳುವುದಿಲ್ಲ. ಬದಲಾಗಿ ಅವನು ಸದಾ

www.uzairfalahi.com

ಮಾನವನ ಸ್ವಭಾವದಲ್ಲಿರುವ ದೌರ್ಬಲ್ಯವನ್ನು ಕಂಡು ಹುಡುಕಿ ದಾಳಿಯೆಸಗುತ್ತಾನೆ. ಮೊದಲು ಬೆರಳನ್ನು ಹಿಡಿಯುತ್ತಾನೆ. ಬಳಿಕ ಕ್ರಮೇಣ ಕೊರಳಿಗೆ ಕೈ ಹಾಕುತ್ತಾನೆ. ಸಮುದಾಯಗಳ ದುರ್ಬಲ ಸ್ಥಿತಿಯಲ್ಲಿ ಮೇಲ್ನೋಟಕ್ಕೆ ಸರಿಯೆಂದು ತೋರುವಂತಹ ಕ್ಷೋಭೆಯೇನಿದೆಯೋ (ಅದು ವಿಶ್ವಾಸಕ್ಕೆ ಸಂಬಂಧಿಸಿದ್ದರೂ ಅಥವಾ ಕರ್ಮಕ್ಕೆ ಸಂಬಂಧಿಸಿದ್ದರೂ) ಅದರಿಂದ ರಕ್ಷಣೆ ಹೊಂದುವುದು ಮತ್ತು ಅದರ ಸುಳಿಯಿಂದ ಹೊರ ಬರುವುದು ತೀರಾ ಕಷ್ಟವಾಗಿದೆ.

- ಸಮುದಾಯಗಳು ಈ ಸ್ಥಿತಿಗೆ ತಲುಪಿದ ನಂತರ ಅದು ಉದ್ಧಟತನದ ಪರಮಾವಧಿಗೆ ತಲುಪಿಬಿಡುತ್ತದೆ. ಆಮೇಲೆ ಅಲ್ಲಾಹ್ ಆ ಸಮುದಾಯವನ್ನು ನಾಶಗೊಳಿಸಿ ಬಿಡುತ್ತಾನೆ.

- ಸಮುದಾಯಗಳ ಉತ್ಥಾನ ಮತ್ತು ಪತನವು ಮೂಲತಃ ಅವುಗಳ ವಿಶ್ವಾಸ ಮತ್ತು ಕರ್ಮವನ್ನು ಅವಲಂಬಿಸಿದೆಯೇ ಹೊರತು ಭೌತಿಕ ಸಂಪನ್ಮೂಲ ಮತ್ತು ಸೌಲಭ್ಯಗಳನ್ನಲ್ಲ.

- ಜಗತ್ತಿನಲ್ಲಿ ಸಾಮೂಹಿಕ ಕೇಡು ಹುಟ್ಟಿದಾಗಲೆಲ್ಲ, ಅಲ್ಲಾಹನು ತನ್ನ ಕೃಪೆಯಿಂದ ಮಾನವರ ಮಾರ್ಗದರ್ಶನಕ್ಕಾಗಿ ಪ್ರವಾದಿಗಳನ್ನು ಮತ್ತು ಸಂದೇಶವಾಹಕರನ್ನು ಕಳುಹಿಸಿದ್ದಾನೆ.

- ಪ್ರವಾದಿಗಳ ಮೇಲೆ ಎಷ್ಟು ಮಂದಿ ವಿಶ್ವಾಸವಿರಿಸಿದರು ಎಂಬುದು ಅವರ ಯಶಸ್ಸಿನ ಮಾನದಂಡವಲ್ಲ. ಬದಲಾಗಿ ಅವರು ಅಲ್ಲಾಹನ ವತಿಯಿಂದ ಹೊರಿಸಲ್ಪಟ್ಟಿರುವ ಹೊಣೆಗಾರಿಕೆಯನ್ನು ದೃಢತೆ ಮತ್ತು ಸಂತೃಪ್ತಿಯೊಂದಿಗೆ ಆರಂಭದಿಂದ ಕೊನೆಯ ವರೆಗೆ ನಿಭಾಯಿಸುತ್ತಿದ್ದರು.

- ಪ್ರವಾದಿಗಳ ಸಂದೇಶದ ಪರಿಣಾಮವಾಗಿ ಜನರು ಎರಡು ಗುಂಪುಗಳಾಗಿ ಹಂಚಿ ಹೋಗುತ್ತಿದ್ದರು. ಒಂದು ಗುಂಪು ಸತ್ಯವಿಶ್ವಾಸಿಗಳದ್ದಾದರೆ, ಇನ್ನೊಂದು ಗುಂಪು ಸತ್ಯನಿಷೇಧಿಗಳದ್ದಾಗಿದೆ. ಅದರ ಹೊರತಾದ ಬೇರೆ ವಿಂಗಡನೆ ಸ್ವೀಕಾರಾರ್ಹವಾಗುವುದಿಲ್ಲ. ವಿಶ್ವಾಸ ಮತ್ತು ನಿಷೇಧದ ಹೊರತು ಅನುಸರಣೆ ಮತ್ತು ನಿರಾಕರಣೆಯ ಬೇರೆ ಮಾನದಂಡವೂ ಉಳಿಯುವುದಿಲ್ಲ. ಆದ್ದರಿಂದ ವಿಶ್ವಾಸವಿರಿಸದಿದ್ದರೆ ಪ್ರವಾದಿಯ ಮಗನಾಗಿರುವುದರಿಂದ ಅಥವಾ ಪ್ರವಾದಿಯ ತಂದೆಯಾಗಿರುವುದರಿಂದ ಅಥವಾ ಅವರೊಡನೆ ಬೇರಾವುದಾದರೂ ನಿಕಟ ಸಂಬಂಧವಿರುವುದರಿಂದ ಯಾವುದೇ ಪ್ರಯೋಜನವಿಲ್ಲ.

- ಪ್ರಾರಂಭದಲ್ಲಿ ಪ್ರವಾದಿಗಳ ಮೇಲೆ ವಿಶ್ವಾಸವಿರಿಸುವವರು ಸಮಾಜದ ದುರ್ಬಲ, ಬಡ ಮತ್ತು ನಿರ್ಗತಿಕ ಜನರಾಗಿರುತ್ತಾರೆ; ಅಂತೆಯೇ ಸರದಾರರು ಮತ್ತು ಶ್ರೀಮಂತರು ಸಾಮಾನ್ಯವಾಗಿ ಅವರ ವಿರೋಧಿಗಳೇ ಆಗಿರುತ್ತಾರೆ ಎಂಬುದು ಪ್ರವಾದಿಗಳ ಸಂದೇಶ ಪ್ರಚಾರದ ಇತಿಹಾಸದಿಂದ ತಿಳಿದು ಬರುತ್ತದೆ.

- ಪ್ರವಾದಿ ನೂಹ್(ಅ)ರ ವೃತ್ತಾಂತಕ್ಕೆ ಸಂಬಂಧಿಸಿ ಅವರ ಪ್ರಾಯ, ಅವರು ನಿರ್ಮಿಸಿದ ನಾವೆಯ ಸ್ಥಿತಿ (ಅಂದರೆ ಅದು ಎಷ್ಟು ಉದ್ದ ಮತ್ತು ಅಗಲವಿತ್ತು ಇತ್ಯಾದಿ), ಅಂತೆಯೇ ಆ ವೃತ್ತಾಂತದ ಉಪಕತೆಗಳು ಹಾಗೂ ವಿವರಗಳು ಎಲ್ಲವೂ ವಿವಿಧ ತಫ್ಸೀರ್‌ಗಳಲ್ಲಿ ಕಾಣಸಿಗುತ್ತವೆ. ಅವುಗಳಲ್ಲಿ ಹೆಚ್ಚಿನವು ವಿಶ್ವಾಸಾರ್ಹವಲ್ಲ. ಸಾಮಾನ್ಯವಾಗಿ ಅವೆಲ್ಲವೂ ಗ್ರಂಥದವರ ವರದಿಗಳನ್ನು ಆಧರಿಸಿವೆ.

www.uzairdahi.com

ಆದ್ದರಿಂದಲೇ ಅವುಗಳಲ್ಲಿ ಹಲವಾರು ಭಿನ್ನತೆಗಳಿವೆ. ನಾವು ಪವಿತ್ರ ಕುರ್‌ಆನಿನ ಉಲ್ಲೇಖಗಳನ್ನು ಮಾತ್ರವೇ ಅನುಸರಿಸಬೇಕಾಗಿದೆ. ಅದರ ಹೊರತು ಹೆಚ್ಚಿನ ವಿವರಗಳನ್ನು ಅರಿಯುವ ಪ್ರಯತ್ನದಲ್ಲಿ ತೊಡಗಬಾರದು. ವಾಸ್ತವದಲ್ಲಿ ಈ ವೃತ್ತಾಂತಗಳನ್ನು ಉಲ್ಲೇಖಿಸುವ ಮೂಲಕ ಪವಿತ್ರ ಕುರ್‌ಆನ್ ನಮಗೆ ಏನನ್ನು ಹೇಳಲು ಬಯಸುತ್ತಿದೆ ಎಂಬುದರ ಮೇಲೆ ನಮ್ಮ ದೃಷ್ಟಿ ಇರಬೇಕಾಗಿದೆ.

* * * * *

www.uzairfalahi.com